**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ 510/2023**

**ಸಾಕ್ಷಿಯನ್ನು ದಿಃ 06.02.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಸುನಿತಮ್ಮ ಟಿ | ಸಿಡಬ್ಲ್ಯೂ4 | ಪಿಡಬ್ಲ್ಯೂ3 |
| ಗಂಡನ ಹೆಸರು | ಲೋಕೇಶ | | |
| ವಯಸ್ಸು | 48 ವರ್ಷ | | |
| ಉದ್ಯೋಗ | ಗ್ರಂಥಾಲಯ ಮೇಲ್ವಿಚಾರಿಕಿ | | |
| ವಾಸಸ್ಥಳ | ನಂಜಾಪುರ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನನಗೆ ಚಾಸಾ 1 ರಿಂದ 3, 5 ರಿಂದ 8 ಗೊತ್ತು. ಮೃತ ಜ್ಯೋತಿ ಮತ್ತು ಮೃತ ನಾಗಯ್ಯ ಗೊತ್ತು. ನಾಗಯ್ಯ ಮತ್ತು ಜ್ಯೋತಿ ಒಂದು ರಸ್ತೆ ಅಪಘಾತದಲ್ಲಿ ಮೃತ ಪಟ್ಟರು. ದಿನಾಂಕ 27.06.2022 ರಂದು ಮಂಡ್ಯದಲ್ಲಿ ಗ್ರಂಥಾಲಯ ಮೇಲ್ವಿಚಾರಕ ಸಭೆ ಇತ್ತು. ಸದರಿ ಸಭೆಯಲ್ಲಿ ಭಾಗವಹಿಸಲು ನಾನು, ಚಾಸಾ 1 ರಿಂದ 3, 5 ರಿಂದ 8 ರವರು ಹೋಗಿದ್ದೆವು. ಅದೇ ದಿನ ರಾತ್ರಿ 8 ಗಂಟೆಗೆ ನಾವು ವಾಪಸ್ಸು ಟೆಂಪೋದಲ್ಲಿ ಊರಿಗೆ ಬರುತ್ತಿದ್ದೆವು. ನಾವು ಮಲ್ಲಿನಾಥಪುರ ಊರಿನಲ್ಲಿ ಬರುತ್ತಿದ್ದಾಗ ಹುಣಸೂರು ಕಡೆಯಿಂದ ಕೆ ಎಸ್ ಆರ್ ಟಿ ಸಿ ಬಸ್ ಬರುತ್ತಿತ್ತು. ಆಗ ಟೆಂಪೋ ಚಾಲಕ ಟೆಂಪೋವನ್ನು ಅಡ್ಡಾದಿಡ್ಡಿಯಾಗಿ ಮತ್ತು ವೇಗವಾಗಿ ಚಲಾಯಿಸಿಕೊಂಡು ಹೋಗಿ ಕೆ ಎಸ್ ಆರ್ ಟಿ ಸಿ ಬಸ್ ಗೆ ಡಿಕ್ಕಿಪಡಿಸಿದರು. ಮುಂದಿನ ಸೀಟ್ ನಲ್ಲಿ ಕುಳಿತಿದ್ದ ನಾಗಯ್ಯರವರಿಗೆ ತಲೆಗೆ ತೀವ್ರ ಸ್ವರೂಪದ ಹಾಗೂ ಕಾಲಿಗೆ ಏಟಾಗಿ ಸ್ಥಳದಲ್ಲಿ ಮೃತಪಟ್ಟರು. ಹಿಂದಿನ ಸೀಟ್ ನಲ್ಲಿ ಕುಳಿತಿದ್ದ ಜ್ಯೋತಿ ರವರಿಗೆ ತಲೆಗೆ ತುಂಬಾ ಏಟಾಗಿತ್ತು. ನನ್ನ ಮಂಡಿ, ಕೈ ಮತ್ತು ಹಣೆಗೆ ಏಟಾಯಿತು. ಉಳಿದವರಿಗೆ ಕೈ, ಕಾಲು ಮತ್ತು ದೇಹದ ಇತರ ಕಡೆಗೆ ಏಟಾಯಿತು. ನಮ್ಮನ್ನು ಆ್ಯಂಬುಲೆನ್ಸ್ ನಲ್ಲಿ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಜ್ಯೋತಿರವರಿಗೆ ತೀವ್ರ ಸ್ವರೂಪದ

ಗಾಯಗಳಾಗಿದ್ದ ಕಾರಣ ಮೈಸೂರಿನ ಬೃಂದಾವನ ಆಸ್ಪತ್ರೆಗೆ ಸೇರಿಸಿದೆವು. ದಿನಾಂಕ 30.06.2022 ರಂದು ಚಿಕಿತ್ಸೆ ಫಲಕಾರಿಯಾಗದೆ ಸಂಜೆ ಸುಮಾರು 5.45 ಕ್ಕೆ ಜ್ಯೋತಿ ಮೃತಪಟ್ಟರು. ಅಪಘಾತವು ಟೆಂಪೋ ಚಾಲಕನಾದ ಪ್ರದೀಪರವರ ತಪ್ಪಿನಿಂದಾಗಿದೆ. ಆ ದಿನ ನಾನು ಟೆಂಪೋ ಚಾಲಕನನ್ನು ನೋಡಿದ್ದೇನೆ. ಈಗ ನೋಡಿದರೆ ಗುರುತಿಸಲಾಗುವುದಿಲ್ಲ.

ನಾನು ಅಪಘಾತದ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ನಾವು ಪ್ರಯಾಣಿಸುತ್ತಿದ್ದ ಟೆಂಪೋ ಟ್ರಾವೆಲರ್ಸ್ ಸಂಖ್ಯೆ ನೆನಪಿಲ್ಲ. ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆ ನೆನಪಿಲ್ಲ. ನಾವು ಆ ದಿನ ಪ್ರಯಾಣಿಸುತ್ತಿದ್ದ ಟೆಂಪೋ ಮತ್ತು ಮುಂದಿನಿಂದ ಬರುತ್ತಿದ್ದ ಬಸ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ 5 ಭಾವಚಿತ್ರಗಳಲ್ಲಿ ಟೆಂಪೋ ವನ್ನು ಮತ್ತು 4 ಭಾವಚಿತ್ರಗಳಲ್ಲಿ ಬಸ್ ನ್ನು ನೋಡಿ ಗುರುತಿಸುತ್ತಾರೆ. ಸದರಿ ಭಾವಚಿತ್ರಗಳನ್ನು ನಿಪಿ 3 ರಿಂದ 11 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು ಸಸಅ ರವರಿಂದಃ–**

ಆ ದಿನ ನಾವು ಪ್ರಯಾಣಿಸುತ್ತಿದ್ದ ಟೆಂಪೋ ಟ್ರಾವೆಲರ್ಸ್ ಸಂಖ್ಯೆ ಕೆಎ–12–ಎ–6816 ಎಂದರೆ ಸರಿ. ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆ ಕೆಎ–09–ಎಫ್–5132 ಎಂದರೆ ಸರಿ. ಆ ದಿನ ಅಪಘಾತಪಡಿಸಿದ ಟೆಂಪೋ ಚಾಲಕ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಆರ್ ವಕೀಲರಿಂದಃ**

ನಾನು ಈಗಲೂ ಗ್ರಂಥ ಪಾಲಕಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಅಪಘಾತದ ಬಗ್ಗೆ ಪರಿಹಾರ ಕೋರಿ ಅರ್ಜಿ ಸಲ್ಲಿಸಿಲ್ಲ. ಆ ದಿನ ಮಳೆ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಅಪಘಾತವಾದ

ತಕ್ಷಣ ನನ್ನನ್ನು ಮತ್ತು ಜೊತೆಯವರನ್ನು 108 ಆ್ಯಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿ. ನಾನು ಈ ದಿನ ಹೊರತುಪಡಿಸಿ ಬೇರೆಯಲ್ಲೂ ಅಪಘಾತದ ಬಗ್ಗೆ ಹೇಳಿಕೆ ಕೊಟ್ಟಿಲ್ಲ. ಅಪಘಾತವಾದ ತಕ್ಷಣ ನನಗೆ ಗಾಯವಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರಿಂದ ಅಪಘಾತ ಹೇಗಾಯಿತು ಎಂದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾಹನ ಅಡ್ಡಾದಿಡ್ಡಿಯಾಗಿ ವೇಗವಾಗಿ ಹೋಗಿ ಡಿಕ್ಕಿಪಡಿಸಿರುವುದರಿಂದ ಅಪಘಾತವಾಗಿದೆ. ಡಿವೈಡರ್ ಹತ್ತಿ ಡಿಕ್ಕಿಯಾಗಿದೆ ಎಂದು ನಿಮಗೆ ಯಾರು ಹೇಳಿದರು ಎಂದರೆ ನಾನೆ ನೋಡಿದ್ದೇನೆ. ಅಪಘಾತ ಈ ರೀತಿಯಾಯಿತು ಎಂದು ಪೊಲೀಸರು ಕೇಳಿದಾಗ ಹೇಳಿದ್ದೇನೆ.

ಅಪಘಾತವು ಯಾರ ತಪ್ಪಿನಿಂದಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಟೆಂಪೋ ಚಾಲಕನ ತಪ್ಪಿನಿಂದ ಅಪಘಾತವಾಗಿದೆ. ನಾನು ಟೆಂಪೋ ಒಳಗೆ ಇದ್ದ ಕಾರಣ ಅಪಘಾತ ಹೇಗಾಯಿತು ಎಂದು ನನಗೆ ಗೊತ್ತಿಲ್ಲದೆ ಇದ್ದರೂ ಸಹ ಬೇರೆಯವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಳಿದ ಗಾಯಾಳುಗಳಿಗೆ ಪರಿಹಾರಕ್ಕೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸ್ಥಳದಲ್ಲಿ ಡಿವೈಡರ್ ಇರಲಿಲ್ಲ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ ಚಾಲಕ ಅತಿವೇಗವಾಗಿ ಬಂದು ನಮ್ಮ ಟೆಂಪೋಗೆ ಡಿಕ್ಕಿಪಡಿಸಿದ ಪರಿಣಾಮ ಅಪಘಾತವಾಗಿದೆ ಎಂದು ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.